ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಶೈ.ಶಾ-04/ದಾ.ವೇ-02/2018-19 ದಿನಾಂಕ: 24-8-2018

## ತಿದ್ದುಪಡಿ ಸುತ್ತೋಲೆ

ವಿಷಯ: ದಾಖಲಾತಿ ಮಾರ್ಗಸೂಚಿ ಕೈಪಿಡಿಯಲ್ಲಿ ಕ್ರೀಡೆಗಳಿಗೆ ಸಂಬಂಧಿಸಿದ ಕೆಲವು ತಿದ್ದುಪಡಿ ಅಳವಡಿಸುವ ಬಗ್ಗೆ.

ಉಲ್ಲೇಖ: ದಿನಾಂಕ: 28-07-2018 ರಂದು ನಡೆದ ಕ್ರೀಡಾ ಸಲಹಾ ಸಮಿತಿಯ ಸಲಹೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನ ದಾಖಲಾತಿ ಮಾರ್ಗಸೂಚಿ ಕೈಪಿಡಿಯಲ್ಲಿ ಕ್ರೀಡಾ ವಿಷಯಕ್ಕೆ ಸಂಬಂಧಿಸಿದಂತೆ, ಕೆಲ ಮಾಹಿತಿಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

1. ಕೈಪಿಡಿಯ 61ನೇ ಪುಟದಲ್ಲಿ ವಿದ್ಯಾರ್ಥಿಗಳ ವಯೋಮಿತಿ ದಿನಾಂಕ: 01-01-1999 ರ ನಂತರ ಎಂದಿದೆ. ಇದನ್ನು ದಿನಾಂಕ: 01-01-2000 ರ ನಂತರ ಎಂದು ತಿದ್ದಿ ಓದಿಕೊಳ್ಳುವುದು.
2. ಪುಟ ಸಂಖ್ಯೆ: 62ರಲ್ಲಿ ಪಂದ್ಯಾಟಗಳ ಕ್ರಮ ಸಂಖ್ಯೆ: 16 ರಲ್ಲಿನ ಟೆನಿಕಾಯ್ಟ್ ಪಂದ್ಯ ಬಾಲಕಿಯರಿಗೆ ಮಾತ್ರ ಎಂದಿದ್ದು, ಇದು ಬಾಲಕರಿಗೂ ಅನ್ವಯವಾಗುತ್ತದೆ.
3. ಜಂಪ್ ರೋಪ್ ಸ್ಪರ್ಧೆಯ ಮಾಹಿತಿಯು ಕೈಪಿಡಿಯಲ್ಲಿ ಇರುವುದಿಲ್ಲ. ಈ ಸ್ಪರ್ಧೆಯನ್ನು ಸೇರ್ಪಡೆ ಮಾಡಿದೆ.
4. ಥ್ರೋಬಾಲ್‌ನಲ್ಲಿ 11 ಕ್ರೀಡಾಪಟುಗಳು ಎಂದಿದ್ದು, ಇದನ್ನು 12 ಎಂದು ತಿದ್ದಿ ಓದಿಕೊಳ್ಳುವುದು.

(ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ)

24/8/18

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ – ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಗಮನಕ್ಕೆ ತರಲು ಸೂಚಿಸಿದೆ.
2. ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮೂಲಕ.
3. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ
5. ಕಚೇರಿ ಪ್ರತಿ.

I covering I letter sara